**ಸಿ.ಸಿ. ನಂಃ 495/2023**

**ಪಿ.ಡಬ್ಲ್ಯೂಃ 1**

**ದಿನಾಂಕ 07.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಆರೋಪಿ ಪರ: ಶ್ರೀ.ಎಲ್.ವಿ.ಆರ್ . ವಕೀಲರಿಂದಃ</u>**

1. ಆರೋಪಿಯ ತಂದೆಯ ಹೆಸರು ನಂಜುಡಶೆಟ್ಟಿ ಅಂತ ಇರುತ್ತದೆ. ಆರೋಪಿಯು ಕೆ ಆರ್ ನಗರದಲ್ಲಿ ವಾಸವಿದ್ದು, ಕೆ ಆರ್ ನಗರ ಬಸ್‌ಸ್ಟಾಂಡ್ ಪಕ್ಕ ಕಾಮಾಕ್ಷಮ್ಮ ಅಂಗಡಿಯ ಬಳಿ ಆರೋಪಿಯ ಅಂಗಡಿ ಇರುತ್ತದೆ. ಆರೋಪಿಯ ಕೆ ಎನ್ ವಂಕಟಶೆಟ್ಟಿ ಅಂತ ಇರುತ್ತದೆ. ಆರೋಪಿಯ ಮನೆಯಲ್ಲಿ ಎಷ್ಟು ಜನ ಕುಟುಂಬ ಸದಸ್ಯರು ಇದ್ದಾರೆ ಎಂದು ನನಗೆ ಗೊತ್ತಿಲ್ಲ.

2. ನಾನು ಎಲ್ಲಾ ವ್ಯವಹಾರಗಳನ್ನು ಬ್ಯಾಂಕ್ ಖಾತೆ ಮೂಲಕ ಮಾಡುವುದಿಲ್ಲ. ನನ್ನ ವ್ಯವಸಾಯದ ಖರ್ಚುಗಳನ್ನು ಕಳೆದು 2023 ರಲ್ಲಿ ನನಗೆ 9 ಲಕ್ಷ ರೂಪಾಯಿ ವಾರ್ಷಿಕ ಆದಾಯವಿತ್ತು. ನನ್ನ ಜಮೀನಿನ ಮೇಲೆ ನಾನು ಸಾಲವನ್ನು ಪಡೆದಿರುವುದಿಲ್ಲ ಆದರೆ ನನ್ನ ಹೆಂಡತಿಯ ಹೆಸರಿನಿಂದ ನನ್ನ ಮಗ ಹೊಸ ಅಗ್ರಹಾರದ ಸಂಘದಿಂದ ವ್ಯವಸಾಯದ ಸಾಲವನ್ನು ಪಡೆದಿರುತ್ತಾನೆ.

3. ನಾನು ಮಿರ್ಲೆ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಭೇರ್ಯ ಶಾಖೆಯ ಇಂಡಿಯನ್ ಓವರಸಿಸ್ ಬ್ಯಾಂಕ್ ಖಾತೆಗಳಲ್ಲಿ ವ್ಯವಹಾರವನ್ನು ಮಾಡುತ್ತೇನೆ. ನನ್ನ ಭತ್ತದ ವ್ಯವಹಾರಗಳನ್ನು ನಾನು ಮಿರ್ಲೆ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಖಾತೆಯಲ್ಲಿ ಮಾಡುತ್ತೇನೆ. ನಾನು ಬೆಳೆದ ಭತ್ತಗಳನ್ನು ಈ ಹಿಂದೆ ಆರ್.ಎಂ.ಸಿ ಗೆ ಕೊಡುತ್ತಿದ್ದೆ. ಆದರೆ 2022-23 ರಿಂದ ಇತ್ತೀಚಿನವರೆಗೂ ನಾನು ಬೆಳೆದ ಭತ್ತಗಳನ್ನು ಆರ್.ಎಂ.ಸಿ ಗೆ ಕೊಡುತ್ತಿಲ್ಲ ಬದಲಾಗಿ ದಲ್ಲಾಳಿಗಳಿಗೆ ಮಾರಾಟ ಮಾಡಿರುತ್ತೇನೆ.

4. 2020-21 ರ ವರೆಗೂ ನಮ್ಮ ಮನೆಯ ವ್ಯವಹಾರಗಳನ್ನು ನನ್ನ ಮಗನಾದ ಹೆಚ್.ಎನ್ ಸುನೈಯ್ ಗೌಡ ನಡೆಸುತ್ತಿದ್ದು, ನನ್ನ ಮಗನ ಮರಣದ ನಂತರ 2022-23 ರ ಸಾಲಿನಿಂದ ನಮ್ಮ ಮನೆಯ ವ್ಯವಹಾರಗಳನ್ನು ನಾನೇ ನಡೆಸುತ್ತಿದ್ದೇನೆ. ನಿಪಿ.6 ರಿಂದ 8 ರ ದಾಖಲೆಗಳಲ್ಲಿ ಭತ್ತ ಬೆಳೆಯುವ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿಯು

ಸದರಿ ಪಹಣಿಗಳು ನನ್ನ ತೆಂಗಿನ ತೋಟಕ್ಕೆ ಸಂಬಂಧಪಟ್ಟ ಪಹಣಿಗಳು ಎಂದು ನುಡಿದಿರುತ್ತಾರೆ. 2022-23 ರ ಸಾಲಿನಲ್ಲಿ ನಾನು ನನ್ನ ಆಸ್ತಿಗಳ ಮೇಲೆ ಯಾವುದೇ ಸಾಲವನ್ನು ಪಡೆದಿರುವುದಿಲ್ಲ. 2022-23 ರ ಸಾಲಿನ ನನ್ನ ವಾರ್ಷಿಕ ಆದಾಯ ಎಷ್ಟು ಇತ್ತು ಎಂದು ತೋರಿಸಲು ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿಗೆ 10 ಲಕ್ಷ ರೂಪಾಯಿ ಕೊಡವಷ್ಟು ನನಗೆ ಆರ್ಥಿಕ ಸಾಮರ್ಥ್ಯ ಇಲ್ಲದಿರುವ ಕಾರಣ ನನ್ನ ಆದಾಯದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು.,ಕೆ.ಆರ್.ನಗರ**